**<u>ದಿನಾಂಕಃ 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಎಸ್ ಎನ್ ವಕೀಲರಿಂದಃ-</u>**

1. ದಾವಾ ಆಸ್ತಿಯ ಸರ್ವೇ ನಂಬರ್ ಎಷ್ಟು ಎಂದರೆ ಸಾಕ್ಷಿ 107/2 ಎನ್ನುತ್ತಾರೆ. ಜಗದಪುರ ಗ್ರಾಮದ ಸರ್ವೇ ನಂ.107/2ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ತಮಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂ.107/2ರ ವಿಸ್ತೀರ್ಣದ ಆಸ್ತಿಯ ಚೆಕ್ಕುಬಂದಿ ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ತನ್ನ ತಂದೆಯ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಸರ್ವೇ ನಂ.107/2 ರ ಆಸ್ತಿಗೆ ಎಷ್ಟು ಜನ ಮಾಲೀಕರು ಇದ್ದಾರೆ ಎಂದರೆ ಸಾಕ್ಷಿ ತನ್ನ ತಂದೆ ಮತ್ತು ಸೂರಿಯಪ್ಪ ಎನ್ನುತ್ತಾರೆ. ವಾದಿ ತಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ಸದರಿಯವರಿಗೆ ಯಾವ ಜಮೀನಿನಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ.

2. ಸರ್ವೇ ನಂ.107ರಲ್ಲಿ ಎಷ್ಟು ಪೋಡುಗಳಾಗಿವೆ ಮತ್ತು ಯಾರ ಯಾರ ಹೆಸರಿನಲ್ಲಿ ಇವೆ ಎಂದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಸರ್ವೇ ನಕ್ಷೆ ನೋಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಸರ್ವೇ ನಂ.107/2 ವಿಸ್ತೀರ್ಣ 20 ಗುಂಟೆಗೆ ನಾರಾಯಣ ರಾವ್ ರವರ ಹೆಸರು ಎಂ ಆರ್ 1/1993-94ರಂತೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ರಾವ್ ಮುಳಿಕ್ ರವರಿಗೆ ಸೇರಿದ 20 ಗುಂಟೆ ಜಮೀನಿನಲ್ಲೆ ನಾವು ಮನೆ ಕಟ್ಟಿರುವುದು ಎಂದರೆ ಸರಿ ಸಾಕ್ಷಿ ಮುಂದುವರೆದು 40 ವರ್ಷಗಳ ಹಿಂದೆ ಸೂರಪ್ಪ ರವರು ತಮಗೆ ಮನೆ ಕಟ್ಟಿ ಕೊಳ್ಳಲು ಜಾಗ ಇಲ್ಲ ಎಂದು ಸದರಿ ಜಾಗವನ್ನು ನಮ್ಮ ತಂದೆಗೆ ಮನೆ ಕಟ್ಟಿಕೊಳ್ಳಲು ಕೊಟ್ಟಿದ್ದರು ಎನ್ನುತ್ತಾರೆ. ಸೂರಪ್ಪ ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಸೂರಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.

3. ಸೂರಪ್ಪ ನಮಗೆ ಮನೆ ಕಟ್ಟಿಕೊಳ್ಳಲು ಸರ್ವೇ ನಂ.107/2 ರಲ್ಲಿ ಜಾಗ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಕ್ರಯ ಪತ್ರ ಅಥವಾ ಇನ್ಯಾವುದೇ ಪತ್ರ ಆಗಿದೆಯಾ ಎಂದರೆ ಸಾಕ್ಷಿ ಕ್ರಯ ಪತ್ರ ಆಗಿಲ್ಲ ಬಾಯಿ ಮಾತಿನಲ್ಲಿ ಹೇಳಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿಯರ ಹೇಳಿಕೆ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಯರು ಮತ್ತು ನಾನು ಹಸು ಮತ್ತು ಮೇಕೆ ಸಾಕಿದ್ದೇವೆ ಎಂದರೆ ಸಾಕ್ಷಿ ನಾನು ಹಸು ಮತ್ತು ಎಮ್ಮೆ ಸಾಕಿದ್ದೇನೆ, ಪ್ರತಿವಾದಿಯರು ಹಸು ಮತ್ತು ಮೇಕೆ ಸಾಕಿದ್ದಾರೆ ಎನ್ನುತ್ತಾರೆ. ವಾದಿಯರಿಗೆ ಸೇರಿದ ಸ್ವತ್ತಿಗೆ ಪ್ರತಿವಾದಿಯರು ದನ ಕರುಗಳನ್ನು ಬಿಟ್ಟು ಅವರ ಸ್ವತ್ತಿನಲ್ಲಿ ಬೆಳೆದಿದ್ದ ಮರ ಮತ್ತು ಸಸಿಗಳನ್ನು ಹಾಳುಮಾಡುತ್ತವೆ ಎಂದು ಜಯರಾಮ್ ಮತ್ತು ಕೆಂಪೇಗೌಡ ಹಾಗೂ ವಾದಿಯರ ನಡುವೆ ಜಗಳ ಆಗಿತ್ತು ಎಂದರೆ ಸರಿಯಲ್ಲ. ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಮಾತ್ತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ